# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ

ನಂ. 09, 2ನೇ ಮಹಡಿ, 1ನೇ ಮುಖ್ಯರಸ್ತೆ, (ಹೊರವರ್ತುಲ ರಸ್ತೆ),ಕೆಂಗೇರಿ ಉಪನಗರ,ಬೆಂಗಳೂರು-60.

ಸಂಖ್ಯೆ : ಸ.ಇಂ/ವಾ-130/ವಾರ್ಡ್‌ಸಭೆ/2020-21 ದಿನಾಂಕ : 06/02/2021

**ವಾರ್ಡ್-130ರ ವಾರ್ಡ್ ಸಭೆಯ ನಡವಳಿ.**

**ದಿನಾಂಕ: 06/02/2021 ರಂದು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿಯ ನಡುವಳಿಗಳು**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ ನೌಕರರು ಮತ್ತು ಸದಸ್ಯರುಗಳು:**

| ಕ್ರ. ಸಂ | ಸದಸ್ಯರ ಹೆಸರು/ಪದನಾಮ | ಪದನಾಮ |
|---|---|---|
| 1 | ಶ್ರೀ ಮುತ್ತುರಾಜ್ | ಮುಖ್ಯ ಲೆಕ್ಕ ಪರಿಶೋಧನಾಧಿಕಾರಿಗಳು ನೋಡಲ್ ಅಧಿಕಾರಿ |
| 2 | ಶ್ರೀ ಕೆ.ಎಂ. ಯಧುಕೃಷ್ಣ | ಸಹಾಯಕ ಇಂಜಿನಿಯರ್ ವಾರ್ಡ್-130 ಹಾಗೂ ಸದಸ್ಯ ಕಾರ್ಯದರ್ಶಿ |
| 3 | ಶ್ರೀ ಗವಿಸಿದ್ದಯ್ಯ | ಸಹಾಯಕ ಇಂಜಿನಿಯರ್ ಬೆಸ್ಕಾಂ(ಬೀದಿ ದೀಪ ನಿರ್ವಹಣೆ) |
| 4 | ಶ್ರೀ ರಾಘವೇಂದ್ರ ಎಂ | ಸಹಾಯಕ ಇಂಜಿನಿಯರ್ ಬಿ.ಡಬ್ಲೂ.ಎಸ್.ಎಸ್.ಬಿ |
| 5 | ಶ್ರೀಮತಿ ಪೂರ್ಣಿಮ | ಸಹಾಯಕ ಇಂಜಿನಿಯರ್ ಬೆಸ್ಕಾಂ |
| 6 | ಶ್ರೀ. ಡಿ. ವಿನಯ್ | ಕಿರಿಯ ಆರೋಗ್ಯ ಪರಿವೀಕ್ಷಕರು. ಬಿ.ಬಿ.ಎಂ.ಪಿ |
| 7 | ಶ್ರೀ ಸಾಯಿ ಸಂದೇಶ್ ಬಿ.ಎಸ್. | ಸಹಾಯಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ |

Scanned with CamScanner

| | | |
|---|---|---|
| 8 | ಶ್ರೀಮತಿ ಶಾರದ ಮುನಿರಾಜು | ಮಾಜಿ ಪಾಲಿಕೆ ಸದಸ್ಯರು ವಾರ್ಡ್ ನಂ.130, ಉಲ್ಲಾಳ |
| 9 | ಶ್ರೀ ತೇಜಸ್ | ಗುತ್ತಿಗೆದಾರರು (ಎಲೆಕ್ಟ್ರಿಕಲ್) |
| 10 | ಶ್ರೀ ಪ್ರಕಾಶ್ ಗೌಡ | ವಾರ್ಡ್ ಕಮಿಟಿ ಸದಸ್ಯರು |
| 11 | ಶ್ರೀಮತಿ ಪ್ರೇಮ ಎನ್ | ವಾರ್ಡ್ ಕಮಿಟಿ ಸದಸ್ಯರು |
| 12 | ಶ್ರೀ ಸಾಯಿ ಸಂದೇಶ್ | ವಾರ್ಡ್ ಕಮಿಟಿ ಸದಸ್ಯರು |
| 13 | ಶ್ರೀ ದಿನೇಶ್ | ವಾರ್ಡ್ ಕಮಿಟಿ ಸದಸ್ಯರು |
| 14 | ಶ್ರೀ ಪಿ.ಆರ್. ಪ್ರಸನ್ನ | ವಾರ್ಡ್ ಕಮಿಟಿ ಸದಸ್ಯರು |
| 15 | ಶ್ರೀ ಶರಣಪ್ಪ ಸಂಗಡಿ | ವಾರ್ಡ್ ಕಮಿಟಿ ಸದಸ್ಯರು |
| 16 | ಶ್ರೀ ಗಿರೀಶ್ | ವಾರ್ಡ್ ಕಮಿಟಿ ಸದಸ್ಯರು |
| 17 | ಶ್ರೀ ಶಶಿಕುಮಾರ್ | ವಾರ್ಡ್ ಕಮಿಟಿ ಸದಸ್ಯರು |
| 18 | ಶ್ರೀ ಬಿ. ಸತೀಶ್ | ವಾರ್ಡ್ ಕಮಿಟಿ ಸದಸ್ಯರು |
| 19 | ಶ್ರೀ ಮೋತಿಲಾಲ್ ಚೌಹಾನ್ | ಸ್ಥಳೀಯ ನಿವಾಸಿ |

ವಾರ್ಡ್ ನಂ.130 ಉಲ್ಲಾಳ ವಾರ್ಡ್‌ನ ಸಹಾಯಕ ಇಂಜಿನಿಯರ್ ಹಾಗೂ ಸದಸ್ಯ ಕಾರ್ಯದರ್ಶಿಯವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿ ನೌಕರರು ಮತ್ತು ವಾರ್ಡ್ ಕಮಿಟಿ ಸದಸ್ಯರನ್ನು ಸ್ವಾಗತಿಸಿದರು.

ನೋಡಲ್ ಅಧಿಕಾರಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ವಾರ್ಡಿನ ವ್ಯಾಪ್ತಿಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಮತ್ತು ವಾರ್ಡ್ ಕಮಿಟಿ ಸದಸ್ಯರುಗಳಿಂದ ಮಾಹಿತಿ ಪಡೆದರು.

ಸಭೆಯಲ್ಲಿ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

1) (ಅ) ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ಬರುವ ಉಪಾಧ್ಯಾ ಬಡಾವಣೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಬೋರ್‌ವೆಲ್ ವ್ಯವಸ್ಥೆ ಮಾಡಬೇಕೆಂದು ಶ್ರೀ ಬಾಲಕೃಷ್ಣರವರು ಸಭೆಯಲ್ಲಿ ಕೋರಿದರು.

(ಆ) ಜ್ಞಾನಭಾರತಿ 2ನೇ ಹಂತ ಹಾಗೂ ಕೆಂಚನಪುರ ಈ ಸ್ಥಳಗಳಲ್ಲಿ ಚರಂಡಿ ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸಿರುವುದಿಲ್ಲವಾದ್ದರಿಂದ, ಚರಂಡಿಗಳಿಗೆ ಕವರಿಂಗ್ ಸ್ಲ್ಯಾಬ್‌ಗಳನ್ನು ಅಳವಡಿಸಬೇಕಾಗಿ ಅಲ್ಲಿನ ಸ್ಥಳೀಯ ನಿವಾಸಿಗಳು ಸಭೆಗೆ ಕೋರಿದರು.

Scanned with CamScanner

(ಇ) ಜನತಾ ಕಾಲೋನಿಯಲ್ಲಿ ಕಳಪೆ ಕಾಮಗಾರಿ ನಡೆದಿರುವುದಾಗಿ ತಿಳಿಸುತ್ತಾ, ಸಂಬಂಧಪಟ್ಟ ಗುತ್ತಿಗೆದಾರರಿಂದ ಕೆಲಸ ನಿರ್ವಹಿಸುವಂತೆ ಸಾರ್ವಜನಿಕರು ಸಭೆಗೆ ತಿಳಿಸಿದರು.

(ಈ)ಶಿವು ಬಡಾವಣೆಯಲ್ಲಿರುವ ಕೊಳವೆಬಾವಿಗೆ ಹೆಚ್ಚುವರಿಯಾಗಿ ಎಂ.ಎಸ್. ಪೈಪ್‌ಗಳನ್ನು ಅಳವಡಿಸಿ ಕುಡಿಯುವ ನೀರಿನ ಅಭಾವವನ್ನು ತಪ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲು ಶಿವು ಬಡಾವಣೆಯ ನಿವಾಸಿಗಳು ಸಭೆಗೆ ಕೋರಿದರು.

ಈ ಸಂಬಂಧ ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ಇಂಜಿನಿಯರ್‌ರವರೊಂದಿಗೆ ಚರ್ಚಿಸಿ ಮೇಲಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳುಲು ಸೂಚಿಸುವುದಾಗಿ ಸಭೆಗೆ ತಿಳಿಸಿದರು (ಕ್ರಮ:- ವಾರ್ಡ್‌ನ ಸಹಾಯಕ ಅಭಿಯಂತರರು, ವಾರ್ಡ್ ನಂ.130, ಉಲ್ಲಾಳ).

2) ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ಬರುವ ಜ್ಞಾನಭಾರತಿ 2ನೇ ಹಂತದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿರುವುದರಿಂದ ಸಂಬಂಧಿಸಿದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳಲ್ಲಿ ಮನವಿ ಸಲ್ಲಿಸಿ ಶೀಘ್ರವಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ಕಲ್ಪಿಸುವಂತೆ ಇಲ್ಲಿನ ಸಾರ್ವಜನಿಕರು ಸಭೆಯನ್ನು ಕೋರಿದರು. ಈ ಸಂಬಂಧ ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಯವರೊಂದಿಗೆ ಮಾತನಾಡಿ ಸಮಸ್ಯೆಯನ್ನು ಬಗೆಹರಿಸುವಂತೆ ತಿಳಿಸಿದರು (ಕ್ರಮ:- ಸಹಾಯಕ ಇಂಜಿನಿಯರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ).

3) ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ಬರುವ ಉದ್ಯಾನವನ(ಪಾರ್ಕ್)ಗಳನ್ನು ಸರಿಯಾಗಿ ನಿರ್ವಹಣೆ ಮಾಡದ ಕಾರಣ ಕೆಲವೊಂದು ಪಾರ್ಕ್‌ಗಳು ಹಾಳಾಗುತ್ತಿರುವ ಬಗ್ಗೆ ವಾರ್ಡ್ ಕಮಿಟಿ ಸದಸ್ಯರು ಸಭೆಯಲ್ಲಿ ತಿಳಿಸಿದರು. ಈ ಸಂಬಂಧ ನೋಡಲ್ ಅಧಿಕಾರಿಗಳು ತೋಟಗಾರಿಕಾ ಅಧೀಕ್ಷಕರಿಗೆ ವಾರ್ಡ್ 130ರ ವ್ಯಾಪ್ತಿಯಲ್ಲಿ ಬರುವ ಉದ್ಯಾನವನ(ಪಾರ್ಕ್)ಗಳನ್ನು ನಿರ್ವಹಣೆ ಮಾಡಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮಾಡಲು ತಿಳಿಸಿದರು (ಕ್ರಮ:- ತೋಟಗಾರಿಕಾ ಅಧೀಕ್ಷಕರು, ಬಿ:ಬಿ.ಎಂ.ಪಿ).

4) ಜ್ಞಾನಭಾರತಿ 4ನೇ ಹಂತದಲ್ಲಿ ಬಾಕಿ ಇರುವ ರಸ್ತೆ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಲು ಮತ್ತು ಪಾರ್ಕ್‌ನಲ್ಲಿ ಅಳವಡಿಸಿರುವ ವ್ಯಾಯಾಮ ಸಲಕರಣೆಗಳನ್ನು ಸರಿಪಡಿಸಲು ತಿಳಿಸಲಾಯಿತು ಹಾಗೂ ಕೆಳಕಂಡ ಸ್ಥಳಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳನ್ನು ನಿವಾರಿಸಲು ಕೊಳವೆಬಾವಿಗಳನ್ನು ಕೊರೆಯಲು ಸಭೆಯಲ್ಲಿ ಚರ್ಚಿಸಲಾಯಿತು (ಕ್ರಮ:- ವಾರ್ಡ್‌ನ ಸಹಾಯಕ ಅಭಿಯಂತರರು, ವಾರ್ಡ್ ನಂ.130, ಉಲ್ಲಾಳ).

Scanned with CamScanner

**<u>ಕೊಳವೆ ಬಾವಿಗಳು ಕೊರೆಬೇಕಾದ ಸ್ಥಳಗಳು:</u>**

1) **ದೊಡ್ಡ ಗೊಲ್ಲರಹಟ್ಟಿ**

2) **ಉಪಾಧ್ಯಾ ಬಡಾವಣೆ**

3) **ರಾಮಕೃಷ್ಣ ಬಡಾವಣೆ**

4) **ಶಿವನಪಾಳ್ಯ**

5) **ಜಗಜ್ಯೋತಿ ಬಡಾವಣೆ**

6) **ನಗೆಮನೆ**

7) **ಕಲ್ಲಪ್ಪ ಲೇಔಟ್, ನಾಗದೇವನಹಳ್ಳಿ**

8) **ಚಿಕ್ಕ ಗೊಲ್ಲರಹಟ್ಟಿ, ನಾಗದೇವನಹಳ್ಳಿ**

9) **ಶಿವು ಬಡಾವಣೆ, ಜ್ಞಾನಭಾರತಿ ಮುಖ್ಯರಸ್ತೆ**

10) ವಾಟರ್ ಪ್ಲಾಂಟ್ ಹತ್ತಿರ ಶಿರ್ಕೆ ವ್ಯಾಪ್ತಿದ ಬಳಿ

ಅಂತಿಮವಾಗಿ ವಾರ್ಡ್‌ನ ಎಲ್ಲಾ ವಾರ್ಡ್ ಕಮಿಟಿಯ ಸದಸ್ಯರಗಳ ಮತ್ತು ವಿವಿಧ ಸಂಘ ಸಂಸ್ಥೆಗಳು ಜೊತೆಗೂಡಿ ಸಮನ್ವಯ ಸಾಧಿಸಿ ಕುಂದು ಕೊರತೆಗಳನ್ನು ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಎಲ್ಲಾ ಅಧಿಕಾರಿ ವರ್ಗದವವರಿಗೆ ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

K.M. [signature]
AE. W.No. 130
Secretary

[signature]
(ಮುತ್ತುರಾಜ್)
ಮುಖ್ಯ ಲೆಕ್ಕ ಪರಿಶೋಧನಾಧಿಕಾರಿಗಳು
ಹಾಗೂ ನೋಡಲ್ ಅಧಿಕಾರಿ,
ವಾರ್ಡ್‌ನಂ.130, ಉಲ್ಲಾಳ
ಕೆಂಗೇರಿ ಉಪ ವಿಭಾಗ
ಬಿ.ಬಿ.ಎಂ.ಪಿ.,ಬೆಂಗಳೂರು.

<u>ಪ್ರತಿಯನ್ನು:</u>

1) ವಲಯ ಆಯುಕ್ತರು ಹಾಗೂ ವಿಶೇಷ ಆಯುಕ್ತರು(ಆಡಳಿತ) ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ತರಲು ಅವರ ಆಪ್ತ ಸಹಾಯಕರಿಗೆ ಸಲ್ಲಿಸಿದೆ.
2) ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆಂ.ಉ.ವಿ/ ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ(ಯಶವಂತಪುರ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಎಲ್ಲಾ ವಾರ್ಡ್ ಕಮಿಟಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
7) ಕಛೇರಿ ಪ್ರತಿ

Scanned with CamScanner